ಗುಲ್ಬರ್ಗಾ ಜಿಲ್ಲೆಯಲ್ಲಿ ಬೆಳೆ ವಿಮೆ ಬಾಕಿ ಬಗ್ಗೆ

3746 (4193) : ಶ್ರೀ ರೇವುನಾಯಕ್ ಬೆಳಮಗಿ (ಕಮಲಪೂರ್) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ವಿಮೆಯನ್ನು ರೈತರಿಗೆ ಹಂಚಿಕೆ ಮಾಡಲಾಗಿದೆಯೇ ಹಾಗಿದ್ದಲ್ಲಿ ಕ್ಷೇತ್ರಗಳವಾರು ರೈತರ ವಿವರ ನೀಡುವುದು;

ಆ) ಬೆಳೆ ವಿಮೆ ಹಂಚಿಕೆಯಲ್ಲಿ ಎಷ್ಟು ಬಾಕಿ ಇವೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು? (ವಿವರ ಒದಗಿಸುವುದು)

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ 2002ರ ಮುಂಗಾರು ಹಂಗಾಮಿನಲ್ಲಿ ಹೆಸರು , ಉದ್ದು, ಕಬ್ಬು ಹತ್ತಿ (ನೀರಾವರಿ) ಜೋಳ ನೆಲಗಡಲೆ (ಶೇಂಗಾ) ತೊಗರಿ, ಬತ್ತ ನೀರಾವರಿ) ಭತ್ತ ಮಳೆ ಆಶ್ರಿತ) ಸಜ್ಜೆ, ಎಳ್ಳು ಮತ್ತು ಸೂರ್ಯಕಾಂತಿ ಬೆಳೆಗಳನ್ನು ಬೆಳೆ ವಿಮಾ ಯೋಜನೆಯಡಿಯಲ್ಲಿ ಅಧಿಸುಚಿಸಲಾಗಿತ್ತು. ಈ ಬೆಳೆಗಳ ಪೈಕಿ ಹಾಲಿ ಭಾರತೀಯ ಸಾಮಾನ್ಯ ವಿಮಾ ನಿಗಮವು ಹೆಸರು ಉದ್ದು, ಜೋಳ ಸಜ್ಜೆ ಎಳ್ಳು ಮತ್ತು ಸೂರ್ಯಕಾಂತಿ ಬೆಳೆಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥ ಪಡಿಸಿರುತ್ತದೆ. ಇತ್ಯರ್ಥಪಡಿಸಲಾದ ಈ ಬೆಳೆಗಳ ತಾಲ್ಲೂಕುವಾರು ಬೆಳೆ, ವಿಮಾ ನಷ್ಟ ಪರಿಹಾರ ಹಾಗೂ ಫಲಾನುಭವಿ ರೈತರ ಸಂಖ್ಯೆಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಉಳಿದ ಬೆಳೆಗಳಾದ ಭತ್ತ ಮತ್ತು ನೆಲಗಡಲೆ (ಶೇಂಗಾ ಬೆಳೆಗಳನ್ನು ಭಾರತೀಯ ಸಾಮಾನ್ಯ ವಿಮಾ ನಿಗಮವು ಮಾಹಿತಿಯನ್ನು ಕ್ರೋಢೀಕರಿಸುತ್ತಿದ್ದು ಇಷ್ಟರಲ್ಲೇ ಈ ಬೆಳೆಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವುದು. ತೊಗರಿ ಬೆಳೆಗೆ ಬೆಳೆ ವಿಮಾ ನಷ್ಟ ಪರಿಹಾರವನ್ನು ಅಂತಮಗೊಳಿಸಿದ್ದು ಸಧ್ಯದಲ್ಲಿಯೇ ವಿತರಿಸಲಾಗುವುದೆಂದು ಭಾರತೀಯ ಸಾಮಾನ್ಯ ವಿಮಾ ನಿಗಮವು ತಿಳಿಸಿರುತ್ತದೆ. ಕಬ್ಬು ಮತ್ತು ಹತ್ತಿ ಬೆಳೆ ದೀರ್ಘಾವಧಿ ಬೆಳೆಗಳಾಗಿರುವ ಪ್ರಯುಕ್ತ ಇಳುವರಿ ಮಾಹಿತಿಯ ಆಗಸ್ಟ್ ಮಾಹೆಯ ಅಂತ್ಯದೊಳಗೆ ಭಾರತೀಯ ಮತ್ತು ಸಾಂಖ್ಯಿಕ ಇಲಾಖೆಯವರು ಕಳುಹಿಸಿಕೊಡುವರು. ನಂತರ ಈ ಬೆಳೆಗಳಿಗೆ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವುದು.

ನೇಕಾರರ ಸಹಕಾರಿ ಸಂಘಗಳಿಗೆ ಬಿಡುಗಡೆಯಾಗಬೇಕಾದ ಸಹಾಯಧನ

3750 (4332) : ಶ್ರೀ ಯು.ಆರ್. ಸಭಾಪತಿ (ಉಡುಪಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ನೇಕಾರರ ಸಹಕಾರಿ ಸಂಘಗಳಿಗೆ 2000-01. 2001-02, 2002-03ರ ಸಾಲಿನಲ್ಲಿ ಬಿಡುಗಡೆಯಾಗಬೇಕಾಗಿದ್ದ ಸಹಾಯಧನವೆಷ್ಟು, ಜಿಲ್ಲಾವಾರು ವಿವರ ನೀಡುವುದು?

ಆ) ಇವುಗಳಲ್ಲಿ ಬಿಡುಗಡೆ ಮಾಡಬೇಕಾಗಿರುವ ಧನಸಹಾಯವೆಷ್ಟು ವಿವರ ನೀಡುವುದು?

ಇ) ಈ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು)

ಅ) ವಿವರಗಳನ್ನು ಅನುಬಂಧ 1,2 ಮತ್ತು 3 ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ 1, 2 ಮತ್ತು 3 ರಲ್ಲಿ ನೀಡಲಾಗಿದೆ.

ಇ) ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಲು ಕ್ರಮಕ್ಕೆಗೊಳ್ಳಲಾಗುತ್ತಿದೆ.